# ಹೈದ್ರಾಬಾದ ಕರ್ನಾಟಕದ ಶಾಸ್ತ್ರಸಾಹಿತ್ಯ.

**ಡಾ. ಅನುಸೂಯಾ ಜಿ. ಪಾಟೀಲ**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಯಾದಗಿರಿ.

**Article Link:** https://aksharasurya.com/2023/07/anusuya-g-patil/

ಹೈದ್ರಾಬಾದ ಕರ್ನಾಟಕ ಪ್ರದೇಶದ ಸಾಹಿತ್ಯ ಆರಂಭವಾದದ್ದು ಕವಿರಾಜಮಾರ್ಗದಿಂದಲೇ ಇದು ಕನ್ನಡದ ಮೊದಲ ಉಪಲಬ್ಧ ಕೃತಿ. ಇದು ಕಾವ್ಯ ಕೃತಿ ಆದಂತೆ ಶಾಸ್ತ್ರ ಗ್ರಂಥವಾಗಿರುವುದು, ಮುಖ್ಯವಾಗಿದೆ. ಹೈದ್ರಾಬಾದ ಕರ್ನಾಟಕದ ಸಾಹಿತ್ಯ, ಶಾಸ್ತ್ರ ಸಾಹಿತ್ಯ ಆರಂಭವಾದದ್ದು ಇಲ್ಲಿಂದಲೇ ಎನ್ನಬೇಕು. ಈ ಶಾಸ್ತ್ರ ಸಾಹಿತ್ಯದಲ್ಲಿ ಶಾಸನ, ಭಾಷಾ ವಿಜ್ಞಾನ, ಕಾವ್ಯಮೀಮಾಂಸೆ, ಛಂದಸ್ಸು ಇವುಗಳನ್ನೆಲ್ಲ ಅಧ್ಯಯನ ಮಾಡುವುದೇ ಶಾಸ್ತ್ರ ಸಾಹಿತ್ಯವಾಗಿದೆ.

ಶಾಸನಗಳು ಪ್ರಾಚೀನ ಜನಾಂಗದ ಜೀವನದ ವಿವರಗಳನ್ನು ನೀಡುವ ಜೀವಂತ ದಾಖಲೆಗಳಾಗಿವೆ. ಇವುಗಳ ರಕ್ಷಣೆಯೆಂದರೆ, ಜ್ಞಾನದ ಶಾಖೆಗಳನ್ನು ಕಾಪಾಡಿಕೊಂಡು ಬಂದಂತೆ ಇಂತಹ ಒಂದು ಕ್ಷೇತ್ರದಲ್ಲಿ ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಕಾರ್ಯ ಮಾಡಿದ ವಿದ್ವಾಂಸರೆಂದರೆ, ಶ್ರೀ ಪೆದ್ದಯ್ಯ, ಡಾ. ಪಿ. ಬಿ. ದೇಸಾಯಿ, ಡಾ. ಬಿ. ವಿ. ಶಿರೂರು, ಶ್ರೀ ಕಪಟರಾಳ ಕೃಷ್ಣರಾಯರು, ಸೀತಾರಾಮ ಜಾಗೀರದಾರ್, ವಿ. ಶಿವಾನಂದ, ಲಕ್ಷ್ಮಣ ಆಳವಾಡಿ, ಧೀರೇಂದ್ರಾ ಚಾರ್ಯಕಟ್ಟಿ, ನಾ.ಬಿ. ಶಾಸ್ತ್ರಿ, ಡಿ. ಎನ್. ಅಕ್ಕ, ಜಿ. ಎಸ್. ದೀಕ್ಷಿತ್, ಚನ್ನಬಸವ ಹಿರೇಮಠ, ಡಾ. ಹನುಮಾಕ್ಷಿ ಗೋಗಿ, ಡಾ. ಚನ್ನಬಸವ ಪಾಟೀಲ, ಡಾ. ಎಸ್. ಎಂ. ಹಿರೇಮಠ, ಡಾ. ಬಸವರಾಜ ಸಬರದ ಮುಂತಾದವರು.

ಶ್ರೀ ಪೆದ್ದಯ್ಯನವರು ಆಂಧ್ರ ಮೂಲದಿಂದ ಬಂದು ಪೂನಾದಲ್ಲಿ ಅಭ್ಯಾಸ ಮಾಡಿ ಕಲಬುರಗಿ ಜಿಲ್ಲೆಯಲ್ಲಿನ ಪುರಾತತ್ವ ಶೋಧ ಕೈಕೊಂಡು ಇಲ್ಲಿನ ಶಾಸನಗಳನ್ನು ಶೋಧಿಸಿ ಅಧ್ಯಯನ ಮಾಡಿದ್ದಾರೆ. ಪಿ. ಬಿ. ದೇಸಾಯಿ ಅವರು ಇತಿಹಾಸ ಸಂಶೋಧಕರು ಶಾಸನಗಳು ಪತ್ತೆ ಹಚ್ಚಿ ಶಾಸನಗಳ ಮಹತ್ವ ಎತ್ತಿ ತೋರಿಸಿದ್ದಾರೆ. ಭಾರತ ಸರ್ಕಾರದ ಪುರಾತತ್ವ ಇಲಾಖೆಯ ಶಾಸನ ಸಂಶೋಧನ ವಿಭಾಗದ ಹುದ್ದೆಯಲ್ಲಿದ್ದಾಗ Government Epigraphist of India ಮದ್ರಾಸ್ ದಲ್ಲಿ

ಸ್ಥಾಪಿಸಿದರು. ಅಲ್ಲಿಯೇ 17 ವರ್ಷಗಳ ಕಾಲ ಶಾಸನ ಸಂಶೋಧನೆಗೆ ತೊಡಗಿದ ವಿದ್ವಾಂಸರಾಗಿದ್ದಾರೆ. ಕೊಪ್ಪಳ ಜಿಲ್ಲೆಯ ಶಾಸನ, ಹೈದ್ರಾಬಾದ ಸಂಸ್ಥಾನದ ಕನ್ನಡ ಶಾಸನಗಳ ಸಂಗ್ರಹ (1958), ಆಂಧ್ರಪ್ರದೇಶದ ಕನ್ನಡ ಶಾಸನಗಳ ಸಂಗ್ರಹ (1961), ಆಂಧ್ರ ಪ್ರದೇಶದ ಶಾಸನಗಳ ಸಂಗ್ರಹ (1961) ಮಾಡಿದ್ದಾರೆ. ದಕ್ಷಿಣ ಭಾರತದ ಶಾಸನಗಳು, ಮುಂಬಯ ಕರ್ನಾಟಕ ಶಾಸನ ಹೊರತಂದಿದ್ದಾರೆ.

ಡಾ. ಅ. ಸುಂದರ, ಡಾ. ಎಸ್. ಎಚ್. ಅತ್ರಿ, ಡಾ. ತಳವಾರ, ಡಾ. ರು. ಮ ಷಡಕ್ಷರಯ್ಯ, ಡಾ. ಚಿನ್ನಕ್ಕೆ ಪಾವಟಿ, ಇವರು ಈ ಭಾಗದವರು ಆದರೂ ಸಹ ಇಲ್ಲಿನ ಶಾಸನಗಳನ್ನು ಪತ್ತೆ ಮಾಡಿ ಚಂದ್ರಲಾಂಬ ಎನ್ನುವುದು ಬೌದ್ಧರ ಹೆಸರು ಎಂದು ದಾಖಲಿಸಿದ್ದಾರೆ. ಇದೊಂದು ಬೌದ್ಧ ಪ್ರಾಚೀನ ವಿದ್ಯಾಕೇಂದ್ರವೆಂದು ಸಹ ಮೌಲಿಕ ವಿಚಾರ ಎತ್ತಿ ಹೇಳಿದ್ದಾರೆ. ಶೈವ ವೀರಶೈವ ಕುರಿತಂತೆ ಅವರ ಶೋಧ ಮುಖ್ಯವಾಗಿದೆ. ನಾಭಾಶಾಸ್ತ್ರಿ ಇವರು ಕೊಪ್ಪಳದಲ್ಲಿನ ಬೌದ್ಧರ ಅಶೋಕನ ಶಾಸನಗಳು ಎಂದು ಮೊದಲು ಹೇಳಿದ್ದಾರೆ. ಹಾಗೇ ಜೈನರ ಕೇಂದ್ರ ಕೊಪ್ಪಳವಾಗಿತ್ತೆಂದು ಮೊದಲು ಸಾರಿದ ಶಾಸ್ತ್ರಿ ಕೊಪ್ಪಣ–ಕೊಪ್ಪಳ ಎಂಬ ಕೃತಿ ಮೂಲಕ ಶಾಸನದ ಮಹತ್ವ ತೋರಿಸಿದ್ದಾರೆ. ಸೀತಾರಾಮ ಜಾಗೀರ್ದಾ ಅವರು ಲಕ್ಷ್ಮೀಶ ಕಲಬುರ್ಗಿ ಜಿಲ್ಲೆಯಲ್ಲಿಯೇ ಹುಟ್ಟಿದೆ ಎಂದು ಪ್ರತಿಪಾದಿಸುತ್ತಾರೆ. ಹಾಗೂ ಸನ್ನತಿಯ ಕೆಲವು ಶಾಸನಗಳ ಅಂಶ ಮೊದಲು ಹೊರಗೆಡವಿದ್ದಾರೆ. ಉತ್ತರ ಕರ್ನಾಟಕದ ಅನೇಕ ಕಡೆ ಸುತ್ತಾಡಿ ಅಧ್ಯಯನ ಮಾಡಿದ್ದಾರೆ. ಆಂಧ್ರಪ್ರದೇಶದ ತೆಲಂಗಾಣ ವಿಭಾಗದಲ್ಲಿ ಕನ್ನಡದ 80 ಶಾಸನಗಳನ್ನು ಬೆಳಕಿಗೆ ತಂದಿದ್ದಾರೆ.

ಡಾ. ಬಿ. ಪಿ. ಮಲ್ಲಾಪುರ ಅವರು ಸುಧಾರ್ಣವ ಎಂಬ ಎರಡು ಸಂಪುಟಗಳ ಸಂಶೋಧನಾತ್ಮಕ ಕೃತಿಯಲ್ಲಿ ಹತ್ತಾರು ಶಾಸನಗಳ ಹೊಸ ಶೋಧ ಹಾಗೂ ಬಿಚಿತ ಹೇಳಿಕೆ ನೀಡಿದ್ದಾರೆ. ಧೀರೇಂದಾಚಾರ್ಯಟ್ಟಿ ಶಾಸನಗಳು ಯಾವುದೇ ಇರಲಿ, ಸುಲಲಿತವಾಗಿ ಓದಿ ಹೇಳುವ ಇವರು ಶಾಸನ ತಜ್ಞರು, ಡಾ. ಹನುಮಾಕ್ಷಿಗೋಗಿ ವೃತ್ತಿ ಬೇರೆ ಆದರೂ ಪ್ರವೃತ್ತಿ ಶಾಸನಗಳ ಶೋಧದ ಕಡೆ ಗಮನ ಹರಿಸಿದ್ದಾರೆ. ಸುರಪುರ, ಶಾಹಾಪೂರ ತಾಲೂಕಿನ ಶಾಸನಗಳ ಮಹತ್ವ ಹೊರಗೆಡವಿ ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ. ಡಾ. ರಂಗರಾಜ ವನದುರ್ಗ ಸುರಪುರ ಸಂಸ್ಥಾನ ಕುರಿತು ಅನೇಕ ಶಾಸನಗಳನ್ನು ಸಂಗ್ರಹಿಸಿ ಹೊರತಂದಿದ್ದಾರೆ. ಶಹಾಪೂರ ತಾಲೂಕಿನ ಹೊಸ ಶಾಸನಗಳನ್ನು ಪುಸ್ತಕ ರೂಪದಲ್ಲಿ ಹೊರತಂದಿದ್ದಾರೆ. ಡಾ. ಎಚ್. ಚಂದ್ರಶೇಖರ ಭೂಗರ್ಭ ಶಾಸ್ತ್ರಜ್ಞರು ಇವರು ರಾಯಚೂರು ಜಿಲ್ಲೆಯ 'ಚಂದನಕೆರೆ' ಶಾಸನಗಳನ್ನು ಪತ್ತೆ ಹಚ್ಚಿದ್ದಾರೆ.

ಡಾ. ಚನ್ನಬಸವ ಹಿರೇಮಠರು ರಾಯಚೂರು ಕೊಪ್ಪಳ ಜಿಲ್ಲೆಯ ಹೊಸ ಶಾಸನಗಳನ್ನು ಬೆಳಕಿಗೆ ತಂದಿದ್ದಾರೆ. ಅವನ್ನು ಪ್ರಕಟಮಾಡಿದ್ದಾರೆ. ಇದುವರೆಗೆ ಇದ್ದ ಎಡೆದೊರೆನಾಡು ಬಿಬ್ಬಿ ಬಾಚರಸ ಮುಂತಾದ ವಿಷಯಗಳ ಕುರಿತು ಶಾಸನ ಆಧರದ ಮೇಲೆ ಖಚಿತತೆಯನ್ನು, ಹೊರಹಾಕಿದ್ದಾರೆ. ಡಾ. ಬಿ. ವಿ. ಶಿರೂರು ಅವರು ಯಲಬುರ್ಗಿ ಸಿಂಧರು ಕುರಿತು ಶಾಸನಗಳ ಮೂಲಕ ಹೇಳಿದ್ದಾರೆ. ಬಿ.ಸಿ. ಪಾಟೀಲರು ಕೊಪ್ಪಳದ ಅನೇಕ ಹೊಸ ಶಾಸನಗಳನ್ನು ಪತ್ತೆ ಹಚ್ಚಿ ಕೃತಿ ರೂಪದಲ್ಲಿ ಪ್ರಕಟಿಸಿದ್ದಾರೆ. ಡಾ. ಎಸ್. ಎಂ. ಹಿರೇಮಠರು, ಡಾ. ಬಸವರಾಜ ಸಬರದ ಶಾಸನಗಳ ಕುರಿತು ಕೃತಿ ಹೊರತಂದಿದ್ದಾರೆ. ಇವರ ಮಧ್ಯ ಶಿಕ್ಷಕರಾಗಿದ್ದು ಯಾವ ಗೊಂದಲದಲ್ಲಿ ಇದ ಡಾ. ಡಿ. ಎಸ್. ಅಕ್ಕಿ ಅವರು ಸಗರನಾಡಿನ ಸಿರಿ, ಶಹಪೂರ ಶಾಸನಗಳು, ಜೈನಾಸನಗಳು – ವಿಗ್ರಹಗಳನ್ನು ಹೊರತಂದು ಇಲ್ಲಿನ ಶಾಸನಗಳ ಮಹತ್ವ ತೋರಿಸುತ್ತಾ ಹೊಸ ಶಾಸನ ಬೆಳಕಿಗೆ ತಂದ ಕೆಲಸ ನಾವು ಮಾಡಬೇಕು, ಶಾಸನ ಕುರಿತು ಗಂಭೀರ ಸಂಶೋಧನೆ, ಅಧ್ಯಯನ ಮಾಡುವ ಹೊಸ ಪ್ರತಿಭೆಗಳು ಹುಟ್ಟಲಿಲ್ಲ ಹೀಗಾಗಿ ಈ ಕ್ಷೇತ್ರ ಬಡವಾಗುತ್ತಿದೆ.

ಡಾ. ವಿಠಲರಾವ್ ಕುಲಕರ್ಣಿಯವರು ಸರಾಗವಾಗಿ ಶಾಸನಗಳನ್ನು ಓದುವ ವಿದ್ವಾಂಸರಾಗಿದ್ದರು. ಮೋಳಿಗೆ ಮಾರಯ್ಯನ 'ಸಪಾದಲಕ್ಷ ಪ್ರದೇಶವು ಎಲ್ಲೋ ದೂರದ ಕಾಶ್ಮೀರದಲ್ಲಿರದೆ ಕಲ್ಯಾಣ ನಾಡಿನ ನೆರೆಹೊರೆಯಲ್ಲಿಯೇ ಇತ್ತು ಎಂಬ ಮಾತನ್ನು ಅವರು ಶಾಸನಾಧಾರದಿಂದ ಪ್ರತಿಪಾದಿಸಲು ಪ್ರಯತ್ನಿಸಿದರು. 'ಕಲ್ಯಾಣ ಕ್ರಾಂತಿ' ಗೆ ಸಂಬಂಧಿಸಿದ ದಾಖಲೆಗಳನ್ನು ಸಂಶೋಧಿಸುವಲ್ಲಿ ಅವರು ಬಹಳ ಪರಿಶ್ರಮ ಪಟ್ಟರು. ಆದರೆ ಅಕಾಲಿಕ ಮರಣದಿಂದಾಗಿ ಅವರ ಸಂಕಲ್ಪ ಸಿದ್ಧಿಸಲಿಲ್ಲ.

ವ್ಯಾಕರಣವನ್ನು ಕಲಿಯುವವರಿಗೆ ಮತ್ತು ಕಲಿಸುವವರಿಗೆ, ಹಳೆಗನ್ನಡ ಓದಲು ಮುಖ್ಯವಾಗಿ ಭಾಷಾಶಾಸ್ತ್ರ ಅವಶ್ಯವಾಗಿದೆ. ಆಧುನಿಕ ಭಾಷಾವಿಜ್ಞಾನದ ರೀತಿಯಲ್ಲಿ ಕನ್ನಡ ವ್ಯಾಕರಣವನ್ನು ಸರಳವಾಗಿ ಕಲಿಯಲು ಸಾಧ್ಯ. ಇಂತಹ ಭಾಷಾ ವಿಜ್ಞಾನದಲ್ಲಿ ಅನ್ವಯಿತವಾಗಿ, ತೌಲನಿಕವಾಗಿ, ಅಧ್ಯಯನ ಮಾಡಿದವರು ಕಡಿಮೆ. ಅವರಲ್ಲಿ ಪಿ. ಬಿ. ದೇಸಾಯಿ, ಸೀತಾರಾಮ್ ಜಾಗೀರ್ದಾ, ಡಾ. ವಿ. ಶಿವಾನಂದ, ಡಾ. ಸಂಗಮೇಶ ಸವದತ್ತಿಮಠ, ಅರ್ಕಶಾಲಿ ವೃಷಭೇಂದ್ರ, ನಾಗೇಂದ್ರ ವಸೂತಿ ಅವರು ಭಾಷಾ ವಿಜ್ಞಾನದ ಮೂಲಕ ಕೆಲವು ಕೆಲಸಗಳಾಗಿವೆ.

ಪಿ.ಬಿ.ದೇಸಾಯಿ ಅವರು ಛಂದಸ್ಸುಗಳಲ್ಲಿ ಷಟ್ಪದಿಯ ಕುರಿತು ಹೊಸದೃಷ್ಟಿಕೋನ ಬೀರಿದ್ದಾರೆ. ಸೀತಾರಾಮ ಜಾಗೀದಾರ ಅವರು ಮಾತ್ರೆ, ಛಂದಸ್ಸು, ರಗಳೆಯನ್ನು ಕುರಿತು ಭಿನ್ನ ನೆಲೆಯಲ್ಲಿ ನೋಡಿದ್ದಾರೆ. ಡಾ. ಪಿ. ಶಿವಾನಂದರು ಭಾಷಾ

ವೈಜ್ಞಾನಿಕ ನೆಲೆಯಲ್ಲಿ ಪದಗಳ ಚರಿತ್ರೆಯನ್ನು ಹೊರತಂದಿದ್ದಾರೆ. ವರ್ಣನಾತ್ಮಕ ಭಾಷಾ ವಿಜ್ಞಾನಕ್ಕೆ ತೋಟಗಾರಿಕೆ ಪದಗಳು, ನಾಮವಿಜ್ಞಾನಗಳನ್ನು ಕುರಿತು ಕೃತಿ ಪ್ರಕಟಿಸಿದ್ದಾರೆ. ಐತಿಹಾಸಿಕ ಭಾಷಾ ವಿಜ್ಞಾನ, ಸಮಾಜಿಕ ಭಾಷಾ ವಿಜ್ಞಾನ, ಉಪಭಾಷಾ ಪರಿವೀಕ್ಷಣೆ ಹಾಗೂ ಅರ್ಥವಿಜ್ಞಾನ ಕಡೆಗೂ ಗಮನಹರಿಸಲಾಗಿದೆ. ಶಬ್ದಮಣಿದರ್ಪಣ, ಕನ್ನಡ ಆಕೃತಿಮಾ ಇವರ ಪ್ರಮುಖ ಕೃತಿಗಳಾಗಿವೆ.

ಡಾ. ಸಂಗಮೇಶ ಸವದತ್ತಿ ಮಠರೆಂದರೆ, ಭಾಷಾ ವಿಜ್ಞಾನಿ ಎನ್ನುವಷ್ಟರ ಮಟ್ಟಿಗೆ ಪ್ರಸಿದ್ಧರು. ಹರಿಹರ ರಗಳೆಗಳ ಭಾಷಿಕ ಅಧ್ಯಯನ ಸಂಶೋಧನೆ ಮಾಡಿದ್ದಾರೆ. ಕನ್ನಡ ಭಾಷಾವ್ಯಾಸಂಗ, ದ್ರಾವಿಡ ಭಾಷಾವ್ಯಾಸಂಗ, ತೌಲನಿಕ ದ್ರಾವಿಡ ಭಾಷಾ ವ್ಯಾಸಂಗ ಅವರ ಪ್ರಮುಖ ಕೃತಿಗಳು. ಕನ್ನಡ ಭಾಷಾ ಕೈಪಿಡಿ, ಕನ್ನಡ ಭಾಷಾ ಸ್ವರೂಪ, ದ್ರಾವಿಡ ಭಾಷೆಗಳು ಮುಖ್ಯವಾಗಿವೆ. ಕಲಬುರಗಿ ಹಾಗೂ ಬೀದರ ಭಾಷೆಗಳ ಕುರಿತು ಸಂಶೋಧನೆ ಮಾಡಿದ್ದಾರೆ. ಕಲಬುರಗಿ ಭಾಗದ ಕೊರವ ಹಾಗೂ ದಲಿತ ಭಾಷೆಗಳ ಬಳಕೆ ಕುರಿತು ಶೋಧ ಮಾಡಿ ದಾಖಲಿಸಿದ್ದಾರೆ. ಈ ಭಾಗದ ಕನ್ನಡ ಭಾಷಾ ಪ್ರಯೋಗದ ಬಗ್ಗೆ ವರ್ಣನಾತ್ಮಕ, ವೈದ್ಯಕ, ವಿಶ್ಲೇಷಣಾತ್ಮಕ ನೆಲಯಲ್ಲಿ ಮುಖ್ಯವಾಗಿವೆ. ಕನ್ನಡ ಭಾಷಾವ್ಯಾಸಂಗ ಪ್ರಾರಂಭದ ಭಾಷೆಯಿಂದ ಹಿಡಿದು ಇಲ್ಲಿನ ಜನರಲ್ಲಿ ಆದ ಬದಲವಾಣೆ ಕುರಿತು ತುಂಬಾ ಮೌಲಿಕವಾಗಿ ಹೊರತಂದಿದ್ದಾರೆ. ದ್ರಾವಿಡರ ಮರುಗ, ಧ್ಯಾನಿಸಿದ ಗ್ರಾಮ, ಆಕೃತಿಮಗಳ ವಿವರಗಳಿವೆ, ಆರ್ಯ ಭಾಷಾ ವ್ಯಾಸಂಗದಂತಹ ಅಪರೂಪದ ಕೃತಿ. ಡಾ. ಸವದತ್ತಿಮಠರೊಬ್ಬರೇ ಜಾನಪದ, ವೀರಶೈವ ಸಾಹಿತ್ಯ, ಸ್ಥಳನಾಮಗಳ ಕುರಿತು ಮಾಡಿದ ಶೋಧ ಮಹತ್ವದಾಗಿದೆ.

ಭೀಮರಾವ್ ಚಿಟಗುಪ್ಪ ಕೀರ್ತನ ಛಂದಸ್ಸನ್ನು ಕುರಿತು ವಿಶ್ಲೇಷಿಸಿದ್ದಾರೆ. ಡಾ. ಎಸ್. ಎಂ. ಹಿರೇಮಠರು ಶಬ್ದಮಣಿದರ್ಪಣದ ವಿಶ್ಲೇಷಣೆ ಪರಾಮರ್ಶೆ ಮಾಡಿದ್ದಾರೆ. ಪ್ರೊ. ಭಾಲಚಂದ್ರ ಜಯಶೆಟ್ಟಿ ಅವರು ಹಿಂದಿ ಭಾಷೆ ಕನ್ನಡ ಭಾಷೆ ಬಲ್ಲವರಾದ್ದರಿಂದ ಅಲ್ಲಿ ಪ್ರತ್ಯಯ ವ್ಯಾಕರಣ ಅಂಶಗಳನ್ನು ಗುರುತಿಸುವ ಪ್ರಯತ್ನ ಮೆಚ್ಚತಕ್ಕದ್ದು, ಡಾ. ವೈ. ಜಿ. ಪುಜಾರ, ಇಟಗಿ ಈರಣ್ಣ ಶಬ್ದಮಣಿದರ್ಪಣಕ್ಕೆ ವಿಶೇಷವಾದ ಅರ್ಥಕೊಟ್ಟು ಸರಳಮಾಡಿದ್ದಾರೆ. ಪ್ರೊ, ಯು ರಾಘವೇಂದ್ರಾರಾವ್ ಅವರು ದರ್ಪಣ ತರಂಗ ವಿಶ್ಲೇಷಣೆ ಮಾಡಿದ್ದಾರೆ. ಸ್ವರವಚನದಲ್ಲಿ ಡಾ. ಎಂ. ಎಸ್. ಲಜ್ಜೆ, ಡಾ. ಮ. ಗು. ಬಿರಾದಾರ್ ಕೆಲಸ ಮಾಡಿದ್ದಾರೆ.

ಬೀದರ ಜಿಲ್ಲೆಯ ಶ್ರೀ ಸುಬ್ಬಣ್ಣ ಅಂಬೆಸಂಗೆ, ಬೀದರ ಜಿಲ್ಲೆಯ ಕನ್ನಡ ಭಾಷಾ ಕುಸುಮ ಎಂಬ ಭಾಷಾ ಪ್ರಬಂಧವನ್ನು ನೀಡಿದ್ದಾರೆ. ಬೀದರ ಜಿಲ್ಲೆಯ

ಸ್ಥಳನಾಮಗಳು, ಕಲಬುರ್ಗಿ ಜಿಲ್ಲೆಯ ಸ್ಥಳನಾಮಗಳು, ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳ ಕುರಿತು ವೈಜನಾಥ ಭಂಡೆ ನಾಗೇಂದ್ರ ಮಸೂತಿ, ಎ. ವೃಷಭೇಂದ್ರ ಆಚಾರ್ಯ ಕೆಲಸಮಾಡಿದ್ದಾರೆ. ಆದರೆ ಭಾಷಾ ವಿಜ್ಞಾನ ಕುರಿತು ಹೆಚ್ಚು ಕೆಲಸ ಮಾಡಿ ಕರ್ನಾಟಕಾದ್ಯಂತ ಹೆಸರಾದವರು ಡಾ. ಸಂಗಮೇಶ ಸವದತ್ತಿ ಮಠರಾಗಿದ್ದಾರೆ.

ವಿಮರ್ಶಾ ಕ್ಷೇತ್ರದಲ್ಲಿ ಹೈದ್ರಾಬಾದ ಕರ್ನಾಟಕ ಹಿಂದೆ ಬಿದ್ದಿದೆ ಎಂಬ ಅಳಲು ಇದೆ. ವಿಮರ್ಶೆ ಎಂದರೆ ತೀರ್ಪು, ಮೌಲ್ಯ ನಿರ್ಣಯ, ಗುಣದೋಷ, ವಿವೇಚನೆ ಎಂದರ್ಥ. ಒಂದು ಸಾಹಿತ್ಯ ಕೃತಿ ಸಂಸ್ಕೃತಿಯನ್ನು ಅಭ್ಯಸಿಸಿ ಆನಂದಿಸಿ ಅದರ ಹಿರಿಮೆ, ಕಿರಿಮೆಯನ್ನು ಅವಲೋಕಿಸಿ ವಿಶ್ಲೇಷಿಸಿ ಕೊನೆಗೊಂದು ಅದರ ಸಾರ್ಥಕ್ಯದ ಬಗೆಗೆ ಹೇಳುವುದೇ ವಿಮರ್ಶೆ. ಡಾ. ಬಸವರಾಜ ಸಬರದರು ಇತ್ತೀಚಿನ ವಿಮರ್ಶಕರಲ್ಲಿ ಒಬ್ಬರು. ಅವರ ಹೊಸದಿಕ್ಕು, ಸಾಹಿತ್ಯ ಸಂಗಾತಿ, ವಚನ ಚಳುವಳಿ, ಬಂಡಾಯ ಕಾವ್ಯ ಮತ್ತು ಜಾನಪದ, ನಿರಂಜನ ಕೃತಿಗಳು ಮುಖ್ಯವಾಗಿದೆ.

ಡಾ. ಸಬರದರು ವಸ್ತುನಿಷ್ಠ ವಿಶ್ಲೇಷಣೆ ತೌಲನಿಕ ವಿಮರ್ಶೆಯಲ್ಲಿ ಇವರ ಹೆಸರು ಎದ್ದು ಕಾಣುತ್ತದೆ. ಡಾ. ಎಸ್. ಎಂ. ಹಿರೇಮಠರ ಸಾವಿನ ಪರಿಕಲ್ಪನೆ ವಿಮರ್ಶಾ ಸಂಪುಟಗಳು ಮುಖ್ಯವಾಗಿವೆ. ರಾಜಶೇಖರ ಹತಗುಂದಿ ಇವರು ಅನೇಕ ಕೃತಿಗಳನ್ನು ವಸ್ತುನಿಷ್ಠವಾಗಿ ವಿಮರ್ಶೆ ಮಾಡುತ್ತಲ್ಲಿದ್ದು ಹೆಸರಾಂತ ವಿಮರ್ಶಕರ ಸಾಲಿಗೆ ಸೇರುವಂತವರಾಗಿದ್ದಾರೆ. ಆಧುನಿಕ ಕನ್ನಡದ ಇತ್ತೀಚಿನ ವಿಮರ್ಶೆಯಲ್ಲಿ ಸ್ತ್ರೀವಾದ ಧೋರಣೆ ಪ್ರಮುಖ ಆಶಯಮಾಡಿಕೊಂಡು ವಿಮರ್ಶಿಸುವ ಡಾ. ಮಲ್ಲಿಕಾ ಘಂಟಿ ಮೊದಲಿಗರು. 'ತನುಕರಗದವರಲ್ಲಿ' ಅವರ ವಿಮರ್ಶಾ ಸಂಕಲನ ಪ್ರಜಾವಾಣಿ, ಲಂಕೇಶ್ ಪತ್ರಿಕೆಗಳಲ್ಲಿ ಕೃತಿ ವಿಮರ್ಶೆ ಪ್ರಕಟವಾಗುತ್ತಿದೆ.

ಇತ್ತೀಚೆಗೆ ಪತ್ರಿಕೆಗಳಲ್ಲಿ ಕೃತಿಗಳನ್ನು ವಿಮರ್ಶಿಸುವ ಯುವಕರಲ್ಲಿ ಮುಖ್ಯವಾಗಿ ಪ್ರಭಾಕರ ಜೋಶಿ, ಶ್ರೀನಿವಾಸ ಕುಷ್ಟಗಿ, ಮಹಿಪಾಲರೆಡ್ಡಿ, ಗವಿಸಿದ್ದ ಪಾಟೀಲ, ದಸ್ತಗೀರ ಸಾಬನ್ನಿ ಮುಂತಾದವರು ಅನೇಕ ಪತ್ರಿಕೆಗಳಲ್ಲಿ ಅಂಥಾಲ–ಜಿಗಳಲ್ಲಿ ಇವರ ಬರಹ ಪ್ರಕಟವಾಗಿವೆ.

ಕಾವ್ಯಮೀಮಾಂಸೆಗೆ ಕುರಿತಂತೆ ನೋಡುವುದಾದರೆ ಕವಿ, ಕಾವ್ಯ, ಸಹೃದಯ, ರಸ, ಅಲಂಕಾರ, ಧ್ವನಿ, ರೀತಿ ಮೊದಲಾದ ಅಂಶಗಳನ್ನು ಶಾಸ್ತ್ರೀಯ ಅಭ್ಯಾಸ ಎಂದು ಕರೆದು ಅವುಗಳ ಸಂಪೂರ್ಣ ಅಭ್ಯಾಸಕ್ಕೆ ಕಾವ್ಯಮೀಮಾಂಸೆ ಅನ್ನಬಹುದು. ಡಾ. ಬಿ. ಬಿ. ಹೆಂಡಿ ಅವರ ಪಾಶ್ಚಾತ್ಯಾತ ಮೀಮಾಂಸೆ, ಡಾ. ವೀರಣ್ಣ ದಂಡೆಯವರ ಜಾನಪದ ಕಾವ್ಯ ಮೀಮಾಂಸೆ ಪ್ರಮುಖವಾದವುಗಳು.

ಡಾ. ಎಸ್. ಎಂ. ಹಿರೇಮಠರ ಪಾಶ್ಚಾತ್ಯ ಭಾರತೀಯ ಕಾವ್ಯಮೀಮಾಂಸೆ, ವಚನಕಾರರ ಕಾವ್ಯಮೀಮಾಂಸೆ, ಕನ್ನಡ ಕಾವ್ಯ ಮೀಮಾಂಸೆ, ಆಧುನಿಕ ಕನ್ನಡ ಕಾವ್ಯಮೀಮಾಂಸೆ ಪ್ರಮುಖವಾಗಿವೆ. ಡಾ. ಕಾಶಿನಾಥ ಅಂಬಲಗೆ ಅವರ 'ಸೌಂದರ್ಯ ಶಾಸ್ತ್ರ' ಚಿತ್ರಕಲೆಗೆ ಸಂಬಂಧಿಸಿದ ಕಾವ್ಯಮೀಮಾಂಸೆ ಅನುವಾದ ಮಾಡಿದ್ದಾರೆ. ಪ್ರೊ. ಭಾಲಚಂದ್ರಜಯಶೆಟ್ಟಿ ಅವರು ಭಾರತೀಯ ಕಾವ್ಯಮೀಮಾಂಸೆಯನ್ನು ಹಿಂದಿಗೆ ಅನುವಾದಿಸಿ ಪ್ರಶಸ್ತಿಯನ್ನು ಪಡೆದಿದ್ದಾರೆ.

ಇವುಗಳೆಲ್ಲ ಶಾಸ್ತ್ರ ಸಾಹಿತ್ಯಕ್ಕೆ ತೋರುಬೆರಳು ಆಗಿದೆ. ಶಾಸ್ತ್ರ ಸಾಹಿತ್ಯದ ಶಾಸನ, ಭಾಷಾವಿಜ್ಞಾನ, ಛಂದಸ್ಸು, ಕಾವ್ಯಮೀಮಾಂಸೆ ಕುರಿತು ಸಾಕಷ್ಟು ಅಧ್ಯಯನ ಆಗಬೇಕಾದದ್ದು ಇದೆ. ಇಲ್ಲಿ 'ಛಂದಶಾಸ್ತ್ರ' ಸಾಹಿತ್ಯ ಕುರಿತು ಕೃತಿ ಹೊರ ಬರದೇ ಇರುವುದು ಒಂದು ದೊಡ್ಡ ಚಿಂತೆ ಆಗಿದೆ. ಶಾಸನ, ಛಂದಸ್ಸು, ಭಾಷಾವಿಜ್ಞಾನ, ಹಸ್ತಪ್ರತಿ ಇವುಗಳ ಅಧ್ಯಯನ ಆಗಬೇಕಾದರೆ ಇವುಗಳ ಪರಿಚಯಬೇಕು.

ವಿಶ್ವವಿದ್ಯಾಲಯ ತರಬೇತಿ, ಡಿಪ್ಲೋಮಾ ಕೋರ್ಸು ಆರಂಭಿಸಿದರೆ ಅವುಗಳಿಂದ ಹೆಚ್ಚಿನ ಪ್ರಗತಿ ಆಗಬಹುದು. ಈಗ ಬಂದ ಕೃತಿಗಳನ್ನು ನಾವು ಹಗುರವಾಗಿ ನೋಡುವಂತಿಲ್ಲ ಇವೆಲ್ಲ ಮೌಲಿಕವಾಗಿವೆ. ಹೈದ್ರಾಬಾದ ಕರ್ನಾಟಕ ಭಾಗ ಶಾಸ್ತ್ರ ಸಾಹಿತ್ಯದಲ್ಲಿ ಸಾಕಷ್ಟು ಬೆಳವಣಿಗೆಯನ್ನು ಕಂಡಿದೆ.

**ಪರಾಮರ್ಶನ ಗ್ರಂಥಗಳು:**

1. ಕಲ್ಯಾಣ ಕರ್ನಾಟಕ ಸಹಿತ್ಯ ಸಮೀಕ್ಷೆ (2002 ನವೆಂಬರ 5), ಭಾಲಚಂದ್ರ ಜಯಶೆಟ್ಟಿ (ಸಂ), ಶ್ರೀ ಸಿದ್ಧಲಿಂಗೇಶ್ವ ಪ್ರಕಾಶನ, ಸರಸ್ವತಿ ಗೋದಾಮ, ಗುಲ್ಬರ್ಗಾ.
2. ಹೈದ್ರಾಬಾದ ಕರ್ನಾಟಕದ ಅಧುನಿಕ ಸಾಹಿತ್ಯ ಮೀಮಾಂಸೆ (2020), ಡಾ. ಬಸವರಾಜ ಸಬರದ, ಪಲ್ಲವಿ ಪ್ರಕಾಶನ.